ಓ ಎಸ್ ನಂಃ 242/2021
ಪಿ. ಡಬ್ಲ್ಯೂ- 1

**(ಇಂದು ದಿನಾಂಕ 04-01-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು)**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರು ಶ್ರೀ ಕೆ ವಿ ಎಚ್ ವಕೀಲರಿಂದ**

ನಾನು 25 ವರ್ಷಗಳಿಂದ ವಕೀಲ ವೃತ್ತಿ ಮಾಡುತ್ತಿದ್ದೇನೆ. ನನ್ನ ಮತ್ತು ಪ್ರತಿವಾದಿ ಸಂಬಂಧ ತುಂಬಾ ಹಳೇಯದು ಎಂದರೆ ಸರಿ. ಪ್ರತಿವಾದಿ ನನ್ನಿಂದ ಆಗ ಆಗ ಕಾನೂನು ಸಲಹೇ ಪಡೆಯುತ್ತಿದ್ದರು ಎಂದರೆ ಸರಿ. ಆ ಮೂಲಕ ನಾನು ಮತ್ತು ಪ್ರತಿವಾದಿ ಕುಟುಂಬ ಸ್ನೇಹಿತು ಆಗಿದ್ದೇವು ಎಂದರೆ ಸರಿ. ಪ್ರತಿವಾದಿ ಹಣದ ಅವಶ್ಯಕತೆ ಇದ್ದಾಗ ನನ್ನಿಂದ ಪಡೆದುಕೊಳ್ಳುತ್ತಿದ್ದರು ಎಂದರೆ ಸರಿ. ನಾನು ಪ್ರತಿವಾದಿ ಇಂದ ಬಡ್ಡಿ ಪಡೆಯುತ್ತಿದ್ದೆನು ಎಂದರೆ ಸರಿಯಲ್ಲ. 2021 ಜನೇವರಿಯಲ್ಲಿ ಕೋರನಾ ಇತ್ತು ಎಂದರೆ ಸರಿ. 2021 ಜನೇವರಿ ಅಲ್ಲಿ ಪ್ರತಿವಾದಿಗೆ ನೌಕರಿ ಇರಲಿಲ್ಲ ಎಂದರೆ ಸರಿಯಲ್ಲ. 2021 ಜನೇವರಿಯಲ್ಲಿ ಪ್ರತಿವಾದಿಗೆ ಹಣದ ಅಡಚಣೆ ಇತ್ತು ಎಂದರೆ ಸರಿ. ಆ ಸಮಯದಲ್ಲಿ ಪ್ರತಿವಾದಿ ರೂ.10 ಲಕ್ಷ ಹಣ ಕೇಳಿದ್ದರು ಎಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ಖರೀದಿ ಕರಾರು ಪತ್ರ ಬರೆದುಕೊಟ್ಟರೆ ನಾನು ಸಾಲ ಕೊಡುತ್ತೇನೆ ಎಂದು ಶರತ್ತು ಹಾಕಿದ್ದೆನು ಎಂದರೆ ಸರಿಯಲ್ಲ. ಪ್ರತಿವಾದಿ ರೂ.12 ಲಕ್ಷ ಹಣ ಕೇಳಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿ ರೂ.12 ಲಕ್ಷ ಸಾಲಕ್ಕಾಗಿ ನನಗೆ ಖರೀದಿ ಕರಾರು ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಲ ಪಡೆಯುವ ಉದ್ದೇಶದಿಂದ ಪ್ರತಿವಾದಿ 2021 ರಲ್ಲಿ ಜನೇವರಿ ಅಲ್ಲಿ ಖರೀದಿ ಕರಾರು ಪತ್ರ ಬರೆದುಕೊಟ್ಟಿರುತ್ತಾರೆ ಹೋರತು ಆಸ್ತಿ ಮಾರಟಕ್ಕೆ ಅಲ್ಲ. ಪ್ರತಿವಾದಿ ದಿಃ 19-01-2021 ರಂದು ನನ್ನ ಖಾತೆಗೆ ರೂ.2 ಲಕ್ಷ ವರ್ಗಾವಣೆ ಮಾಡಿರುತ್ತಾರೆ ಎಂದರೆ

ಸರಿಯಲ್ಲ. ನಾನು ಪ್ರತಿವಾದಿಗೆ ತೊಂದರೆ ನೀಡಿದ ಕಾರಣ ಪ್ರತಿವಾದಿ ಮರು ದಿನ ರೂ.2 ಲಕ್ಷ ಹಣ ವರ್ಗಾವಣೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಿಃ 08-04-2021 ರಂದು ಪ್ರತಿವಾದಿ ನನ್ನ ಹೆಂಡತಿಯ ಖಾತೆಗೆ ಈ ಸಾಲದ ಮರು ಪಾವತಿಗಾಗಿ ರೂ.1 ಲಕ್ಷ ಹಣ ವರ್ಗಾವಣೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ರೂ.62,500/- ಹಣವನ್ನು ಬೇರೆ ಬೇರೆ ದಿನಾಂಕದಂದು ಸಾಲ ಮರುಪಾವತಿಗಾಗಿ ಪೋನ ಪೇ ಮುಖಾಂತರ ಪಾವತಿಸಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ರೂ.4 ಲಕ್ಷ ನಗದು ಹಣವನ್ನು ನನ್ನ ಮನೆಗೆ ಬಂದು ಸಾಲ ಮರುಪಾವತಿಗಾಗಿ ನೀಡಿರುತ್ತಾರೆ ಎಂದರೆ ಸರಿಯಲ್ಲ.

ಆಸ್ತಿ ಮಾರಾಟದ ಒಟ್ಟು ಹಣ ರೂ.12 ಲಕ್ಷ. ನಾನು ಮುಂಗಡ ಹಣ ರೂ.10 ಲಕ್ಷ ನೀಡಿರುತ್ತೇನೆ. ಸಾಮಾನ್ಯವಾಗಿ ಮುಂಗಡ ಹಣ ಸ್ವಲ್ಪ ಇರುತ್ತದೆ ಎಂದರೆ ಸರಿಯಲ್ಲ. ಸಾಲದ ವ್ಯವಾಹಾರ ಆದ ಕಾರಣ ಮುಂಗಡ ಹಣವನ್ನು ರೂ.10 ಲಕ್ಷ ನೀಡಿರುತ್ತೇನೆ ಎಂದರೆ ಸರಿಯಲ್ಲ. ರಾಷ್ಟ್ರಿಯ ಹೇದ್ದಾರಿಯಿಂದ ದಾವಾ ಆಸ್ತಿ 4 ರಿಂದ 5 ಕೀ. ಮೀ ಅಂತರದಲ್ಲಿ ಇದೆ ಎಂದರೆ ಇರಬಹುದು. ರಾಷ್ಟ್ರಿಯ ಹೇದ್ದಾರಿಯಲ್ಲಿ ಐಶಾರಾಮಿ ಹೊಟೇಲಗಳು ಮತ್ತು ರೇಸಾರ್ಟಗಳು ಇರುತ್ತವೆ ಎಂದರೆ ನನಗೆ ಗೊತ್ತಿರುವುದಿಲ್ಲ. ಧಾರವಾಡ ನಗರ ದಾವಾ ಆಸ್ತಿ ವರೆಗೆ ಬೇಳೆದಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಹತ್ತಿರದಲ್ಲಿ ಇತರ ಆಸ್ತಿಗಳು ಭೂಪರಿವರ್ತನೆ ಆಗಿರುತ್ತವೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿ ಭೂಪರಿವರ್ತನೆ ಆಗುವಂತಹ ಆಸ್ತಿ ಆಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಕರಾರು ಸಮಯದಲ್ಲಿ ದಾವಾ ಆಸ್ತಿ ಪ್ರತಿ ಗುಂಟೆಗೆ ರೂ.4 ಲಕ್ಷ ಇತ್ತು ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮೌಲ್ಯ ದಿನೆ ದಿನೆ ಹೆಚ್ಚಾಗುತ್ತಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿ 1 ಗುಂಟೆಗೆ ಇವತ್ತಿನ ಮೌಲ್ಯ 1 ಲಕ್ಷ ಎಂದರೆ ಸರಿಯಲ್ಲ. ದಾವಾ ಆಸ್ತಿ ಇವತ್ತಿನ ಮೌಲ್ಯ ರೂ.1 ವರೆ ಕೋಟಿ ಇರುತ್ತದೆ

ಎಂದರೆ ಸರಿಯಲ್ಲ. ಪ್ರತಿವಾದಿ ಅವರ ತಂದೆ ತಾಯಿಗೆ ಒಬ್ಬನೆ ಮಗ ಎಂದರೆ ಸರಿ. ಆ ಕಾರಣಕ್ಕಾಗಿ ದಾವಾ ಆಸ್ತಿಯನ್ನು ಪ್ರತಿವಾದಿಗೆ ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ದಾವಾ ಆಸ್ತಿಯಲ್ಲಿ ಕೋಳಿ ಫಾರ್ಮ ತಯಾರಿಸಿ ಬೇರೆ ಅವರಿಗೆ ಲೀಸ್ ನೀಡಿರುತ್ತಾರೆ ಎಂದರೆ ಸರಿಯಲ್ಲ. ಕೋಳಿ ಫಾರ್ಮ ತಯಾರಿಕೆಗೆ ರೂ.15 ಲಕ್ಷ ಖರ್ಚಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಕೋಳಿ ಫಾರ್ಮನನ್ನು ರಿಯಾಜ ಎನ್ನುವವರಿಗೆ ವಾರ್ಷಿಕ ಬಾಡಿಗೆ ಹಣ ರೂ.1 ಲಕ್ಷ ಕ್ಕೆ ನೀಡಿರುತ್ತಾರೆ ಎಂದು ಪ್ರಶ್ನೇ ಕೇಳಿರುತ್ತಾರೆ. ಸದರಿ ಪ್ರಶ್ನೆ ಪ್ರತಿವಾದಿಯ ಪ್ರತಿವಾದದ ಅಂಶ ಆಗದೆ ಇರುವುದರಿಂದ ತಳ್ಳಿಹಾಕಲಾಯಿತು.

**ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದುಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ ,

3 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.